# ನೊಂದ ಜೀವಕ್ಕೆ ಆತ್ಮಬಂಧುಗಳ ಸಾವಿನ ಬರೆ

ಅವನೂ ನನ್ನನ್ನು ನೋಡುತ್ತಿದ್ದ, ನನ್ನ ಮುಖದ ಮೇಲೆ ಅವನ ದೃಷ್ಟಿ ತಡಕಾಡುತ್ತಿತ್ತು. ನಂತರ ಅವನ ದೃಷ್ಟಿ ನನ್ನ ತಲೆಯ ಮೇಲಿದ್ದ ಗುರುತಿನ ಮೇಲೆ ಸ್ಥಿರವಾಯಿತು.

‘ಮಮ್ಮಿ, ಏನಾಯ್ತು? ಇದೆಂಥ ಗುರುತು?’

‘ಏನಿಲ್ಲ, ಏನಿಲ್ಲ...’

‘ಹೇಳಿ ಹೇಳಿ... ಲಾರ್ಸ್ ಏನಾದರೂ ಮಾಡಿದನೇ...?’

ನಾನು ಏನನ್ನೂ ಹೇಳದಾದೆ.

‘ನನಗೆ ಮೊದಲೇ ಅನುಮಾನ ಬಂದಿತ್ತು... ನೀವು ಎರಡು ವಾರಗಳ ಎಕ್ಸ್‌ಟ್ರಾ ರಜಾ ಪಡೆದು, ಎರಡು ತಿಂಗಳು ಇಂಡಿಯಾಕ್ಕೆ ಹೋಗುವುದಾಗಿ ಹೇಳಿದಾಗ ಮತ್ತು ಕೆಲವು ದಿನ ಸ್ಕೈಪ್‌ನಲ್ಲಿ ಇರಲ್ಲ ಅಂತ ಹೇಳಿದಾಗಲೇ ನಾನು ಊಹಿಸಿದ್ದೆ.’

‘ಅವನೇನು ಮಾಡಿದ?’ ಜೋಶ್ ಪ್ರಶ್ನಿಸಿದ.

ನನ್ನ ಕಣ್ಣುಗಳು ತುಂಬಿ ಬಂದವು.

‘ಅವನು ನಿಮ್ಮನ್ನು ಹಿಟ್ ಮಾಡಿದ... ಅವನಿಗೆಷ್ಟು ಧೈರ್ಯ! ಅವನನ್ನು ಗುಂಡು ಹೊಡೆದು ಸಾಯಿಸಿಬಿಡ್ತೀನಿ...’

‘ಜೋಶ್, ನೀನೇನೂ ಮಾಡಬಾರದು. ಅವನಿಗೆ ತಕ್ಕ ಶಿಕ್ಷೆ ಸಿಗುತ್ತಿದೆ. ಅವನು ಜೈಲಿನಲ್ಲಿದ್ದಾನೆ. ನೀನು ನಿನ್ನ ವಿದ್ಯಾಭ್ಯಾಸದ ಬಗ್ಗೆ ಗಮನ ಕೊಡು.’

‘ನೀವು ನನ್ನನ್ನು ಮೊದಲ ಬಾರಿಗೆ ಡೆನ್ಮಾರ್ಕ್‌ಗೆ ಕರೆದುಕೊಂಡು ಹೋಗಿದ್ದಿರಿ, ಆಗ ಅಲ್ಲಿ ಅವನು ನನ್ನ ವೀಸಾ ಸ್ಪಾನ್ಸರ್ ಮಾಡಲು ಒಪ್ಪಿರಲಿಲ್ಲ, ಆಗಲೇ ನಾನು ಅವನು ಎಂಥ ಮನುಷ್ಯ ಎಂಬುದನ್ನು ಅರ್ಥ ಮಾಡಿಕೊಂಡಿದ್ದೆ...’

ಜೋಶ್ ಮೊದಲ ಬಾರಿಗೆ ತನ್ನ ಮನಸ್ಸಿನಲ್ಲಿದ್ದ ದ್ವೇಷವನ್ನು ಹೊರ ಹಾಕಿದ. ಆದರೆ ಅವನು ಅದೆಷ್ಟು ವರ್ಷಗಳಿಂದ ಈ ವಿಷಯವನ್ನು ತನ್ನ ಮನಸ್ಸಿನಲ್ಲಿಯೇ ಹತ್ತಿಕ್ಕಿಕೊಂಡಿದ್ದನಲ್ಲ...!

‘ಜೋಶ್, ಲಾರ್ಸ್ ವಿಷಯ ಬಿಡು, ನಿನ್ನ ಬಗ್ಗೆ ಹೇಳು. ನಿನ್ನ ವಿದ್ಯಾಭ್ಯಾಸ ಹೇಗೆ ನಡೆಯುತ್ತಿದೆ...?’

ಈ ನಡುವೆ ಅಕಸ್ಮಾತ್ ಅಪ್ಪ ನನ್ನನ್ನು ಕರೆದರು, ‘ನ್ಯಾನ್ಸಿ...’

‘ಬಂದೆ ಅಪ್ಪಾ... ಜೋಶ್‌ನೊಂದಿಗೆ ಸ್ಕೈಪ್‌ನಲ್ಲಿದ್ದೇನೆ...’

ಮಗನೊಂದಿಗೆ ಮಾತಿನಲ್ಲಿ ಮುಳುಗಿದೆ. ಜೋಶ್ ತನ್ನ ಬಗ್ಗೆ ಹೇಳುತ್ತಿದ್ದ – ಶಾಲೆಯ ವಿಷಯಗಳು... ಸ್ನೇಹಿತರ ವಿಷಯಗಳು... ತನ್ನ ಫುಟ್‌ಬಾಲ್ ಆಟದ ವಿಷಯಗಳು... ಅರ್ಧ ಗಂಟೆಯ ನಂತರ ಮಾತನ್ನು ನಿಲ್ಲಿಸಿ ಹೇಳಿದೆ, ‘ಸರಿ ಜೋಶ್, ಮತ್ತೆ ಮಾತನಾಡೋಣ. ಅಲ್ಲಿ ನಿನಗೂ ಊಟದ ಸಮಯವಾಗಿದೆ, ಅಪ್ಪ ಸಹ ನನ್ನನ್ನು ಕರೆಯುತ್ತಿದ್ದಾರೆ...’

‘ಗುಡ್‌ನೈಟ್ ಮಮ್ಮಿ!’

‘ಗುಡ್‌ನೈಟ್ ಮೈ ಸನ್!’

‘ಲವ್ ಯೂ!’

‘ಲವ್ ಯೂ!’

ನಾನು ಲ್ಯಾಪ್‌ಟಾಪ್ ನಿಲ್ಲಿಸಿ ಹಾಸಿಗೆಯಿಂದ ಎದ್ದು ಲಿವಿಂಗ್‌ರೂಮಿಗೆ ಬಂದೆ. ಅಪ್ಪ ನೆಲದ ಮೇಲೆ ಕವುಚಿ ಮಲಗಿರುವುದನ್ನು ನೋಡಿ ಗಾಬರಿಗೊಂಡೆ. ಅವರು ತಿಂದಿದ್ದ ಇಡಿಯಪ್ಪಮ್ ಮತ್ತು ಮೊಟ್ಟೆ ಕರಿಯನ್ನು ವಾಂತಿ ಮಾಡಿದ್ದರು.

‘ಅಪ್ಪಾ...ಅಪ್ಪಾ...’ ನಾನು ಅವರನ್ನು ಎತ್ತಲು ಪ್ರಯತ್ನಿಸಿದೆ. ಅವರು ಬೆವರಿನಿಂದ ಒದ್ದೆಯಾಗಿ, ಪ್ರಜ್ಞೆಯನ್ನು ಕಳೆದುಕೊಂಡಿದ್ದರು, ಬಾಯಿಯಿಂದ ನೊರೆ ಬರುತ್ತಿತ್ತು. ಕಣ್ಣುಗಳು ಹೊರಳಿದ್ದವು, ಮುಖ ವಿಕಾರವಾಗಿತ್ತು. ನಾನು ಭಯದಿಂದ ಕಂಪಿಸಿದೆ.

ನಾನು ಹೊರಗಿನ ವರಾಂಡಕ್ಕೆ ಬಂದು, ಸಕೀನಾಳ ಮನೆಯ ಕಡೆಗೆ ಮುಖ ಮಾಡಿ ಗಟ್ಟಿಯಾಗಿ ಕೂಗಿದೆ, ‘ಸಕೀನಾ... ರೂಬಿ ಆಂಟಿ...’

ನನ್ನ ಕೂಗು ಕೇಳಿ ತಾಯಿ–ಮಗಳು ಇಬ್ಬರೂ ಓಡೋಡಿ ಬಂದರು. ಇಬ್ಬರೂ ಕೂಡಿ ಅಪ್ಪನ ಕೈ ಕಾಲು ಮತ್ತು ಎದೆಯನ್ನು ತಿಕ್ಕಿದರು. ಸಕೀನಾ ತನ್ನ ಬಾಯಿಯಿಂದ ಅವರಿಗೆ ಕೃತ್ರಿಮ ಉಸಿರನ್ನು ಕೊಡಲು ಪ್ರಯತ್ನಿಸಿದಳು. ನಾನು ಪಾಪುನ್ ಮನೆಗೆ ಫೋನ್ ಮಾಡಿದೆ. ಅವರ ಸೊಸೆ

